**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.517/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ನವೀನ್ ಎಸ್.ಬಿ. | ಫ್ರಾಸಾ-2 |
| ತಂದೆಯ ಹೆಸರು | : ಬಸವರಾಜ್ | ಚಾಸಾ-4 |
| ವಯಸ್ಸು | : 32 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : DRFO | ದಿನಾಂಕಃ 31.10.2025. |
| ವಾಸಸ್ಥಳ | : ಮುತ್ತೋಡಿ ಅರಣ್ಯ ವಲಯ. | |

**<u>:ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ನಾನು 2021 ರಿಂದ 2024 ರವರೆಗೂ ಮೂಡಿಗೆರೆ ಅರಣ್ಯ ವಲಯ ಕಚೇರಿಯಲ್ಲಿ DRFO ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸಾಕ್ಷಿಯು ದಿ.25.11.2022 ರ ಸ್ವತ್ತು ಅಮಾನತ್ತು ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ಐದು ಫೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸದರಿ ಮಹಜರ್ ನ್ನು ನಿಪಿ-11, ಸಾಕ್ಷಿಯ ಸಹಿಯನ್ನು ನಿಪಿ-11(ಎ), ಫೋಟೋಗಳನ್ನು ನಿಪಿ-12 ರಿಂದ 16 ಎಂದು ಗುರುತಿಸಲಾಯಿತು.

ದಿ.25.11.2022 ರಂದು ಬೆ.11.35 ರಿಂದ 12.35 ರವರೆಗೂ ಮೂಡಿಗೆರೆ ಪೋಲಿಸರು ಮೂಡಿಗೆರೆ ಪೋಲಿಸ್ ಠಾಣಾ ಆವರಣದಲ್ಲಿ ಮಹಜರ್ ಬರೆದು ಅರಣ್ಯ ಇಲಾಖೆಗೆ ಸಂಬಂಧಪಟ್ಟ KA-18-G-0997 ಜೀಪನ್ನು ವಶಕ್ಕೆ ಪಡೆದಿದ್ದಾರೆ. ಮಹಜರ್ ಕಾಲಕ್ಕೆ ನಾನು ಮತ್ತು ಚಾಸಾ-5 ಹಾಗೂ ಸದರಿ ಜೀಪ್ ಚಾಲಕರಾದ ಚಾಸಾ-16 ರವರು ಹಾಜರಿದ್ದರು. ದಿ.20.11.2022 ರಂದು ಎಸ್ಟೇಟ್ ಕುಂದೂರಿನಲ್ಲಿ ಆನೆ ತುಳಿತದ ಸಂಬಂಧ ಜಗಳದಲ್ಲಿ ಸಾರ್ವಜನಿಕರು ಜೀಪ್ ಗೆ ಕಲ್ಲು ಹೊಡೆದು ಜೀಪ್ ನ ಹಿಂಬದಿ ಗಾಜು ಪುಡಿ ಮಾಡಿ ಮ್ಯಾಟ್ ಮತ್ತು ಫೂಟ್ ರೆಸ್ಟ್‌ನ್ನು ಜಖಂ ಗೊಳಿಸಿದ ಸಂಬಂಧ ಅದನ್ನು ವಶಕ್ಕೆಪಡೆಯಲಾಯಿತು. ಸದರಿ ವಾಹನಕ್ಕೆ ಸುಮಾರು ರೂ.40,000/- ರಷ್ಟು ನಷ್ಟವಾಗಿದೆ.

**<u>ಪಾಟೀ ಸವಾಲು: 11, 13, 14, 19, 20, 21 ಮತ್ತು 23 ನೇ ಆರೋಪಿತರ ಪರ ಶ್ರೀ ಎಂ.ವಿ.ಜೆ. ವಕೀಲರಿಂದ:</u>**

ಮಹಜರ್ ನ ಪ್ರತೀಪುಟಕ್ಕೂ ನಾನು ಸಹಿ ಮಾಡಿಲ್ಲ. ಮಹಜರ್ ನ್ನು ಮೂರು ಪುಟಗಳಲ್ಲಿ ಟೈಪ್ ಮಾಡಲಾಗಿದೆ. ಆ ಸಮಯಕ್ಕೆ ಜೀಪ್ ಪೋಲಿಸ್ ಠಾಣಾ ಆವರಣದಲ್ಲಿ ಇತ್ತು. ಸದರಿ ಜೀಪ್ ನ ಹಿಂಬದಿ ಗಾಜು ಹೊಡೆದುಹೋಗಿತ್ತು. ದೂರದಿಂದ ಕಲ್ಲಿನಿಂದ ಹೊಡೆದು ವಾಹನದ ಗಾಜು ಪುಡಿ ಮಾಡಿದರೆ ಗಾಜಿನ ಪುಡಿ ವಾಹನದ ಒಳಗೆ ಬಿದ್ದಿರುತ್ತದೆ ಎಂದರೆ ಸರಿ. ಮಹಜರ್ ಕಾಲಕ್ಕೆ ಅಂತಹ ಗಾಜಿನ ಪುಡಿಗಳನ್ನು ವಶಕ್ಕೆ ಪಡೆದಿದ್ದಾರ ಎಂದು ನನಗೆ ಗೊತ್ತಿಲ್ಲ. ಮಹಜರ್ ಕಾಲದಲ್ಲಿ ಫೋಟೋಗಳನ್ನು ತೆಗೆದ ವ್ಯಕ್ತಿ ಮಹಜರ್ ಗೆ ಸಹಿ ಮಾಡಿಲ್ಲ. ನಾನು ಮಹಜರ್ ಗೆ ಸಹಿ ಮಾಡಿದ ದಿನ ಶುಕ್ರವಾರವಾಗಿತ್ತು. ಮಹಜರ್ ಗೆ ಹಾಜರಾಗಲು ನನಗೆ ನೋಟೀಸು ಕೊಟ್ಟಿರಲಿಲ್ಲ. ದಿ.25.11.2022 ರಂದು ನಾನು ಮೂಡಿಗೆರೆ ಅರಣ್ಯ ವಲಯ ಕಚೇರಿಯಲ್ಲಿ ಕರ್ತವ್ಯದಲ್ಲಿ ಇದ್ದೆ. ಮಹಜರ್ ಬರೆದುಕೊಂಡ ನಂತರ ಪೋಲಿಸರು ನನ್ನ ಲಿಖಿತ ಹೇಳಿಕೆ ಪಡೆದುಕೊಂಡಿಲ್ಲ.

ಜೀಪ್ ನ ಫೂಟ್ ರೆಸ್ಟ್ ಜಖಂ ಆದ ಬಗ್ಗೆ ಅದು ಕಾಣುವಂತೆ ಫೋಟೋ ತೆಗೆಯಲಾಗಿದೆ. ಸದರಿ ಜೀಪ್ ಗೆ ಇದ್ದ ಫೂಟ್ ರೆಸ್ಟ್ ಮುಂಬದಿ ಹಾಗೂ ಹಿಂಬದಿಗೆ ಒಂದೇ ಆಗಿತ್ತು. ನಿಪಿ-14 ಮತ್ತು 15 ರಲ್ಲಿ ಸಿಂಗಲ್ ಫೂಟ್ ರೆಸ್ಟ್ ಕಾಣುತ್ತಿದೆ ಎಂದರೆ ಸರಿ. ಸದರಿ ಫೋಟೋಗಳಲ್ಲಿ ಫೂಟ್ ರೆಸ್ಟ್ ಜಖಂ ಆಗಿರುವುದು ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಫೋಟೋಗಳಲ್ಲಿ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ಬೀಟ್ ಕಾಲಕ್ಕೆ ಹಾಗೂ ಆರೋಪಿತರನ್ನು ಬೆನ್ನಟ್ಟುವ ಕಾಲಕ್ಕೆ ಇಲಾಖಾ ವಾಹನದ ಫೂಟ್ ರೆಸ್ಟ್ ಜಖಂ ಗೊಳ್ಳುವ ಸಾಧ್ಯತೆ ಇದೆ ಎಂದರೆ ಸರಿ. ಕಾಡಿನಲ್ಲಿ ಬೀಟ್ ಮಾಡುವ ಕಾಲಕ್ಕೆ ನಾನು ಹೇಳಿದ ಜೀಪ್ ನ ಗಾಜು ಜಖಂ ಗೊಂಡಿತ್ತು ಎಂದರೆ ಸರಿಯಲ್ಲ. ವೈಯಕ್ತಿಕ ತಪ್ಪಿನಿಂದ ಸರ್ಕಾರಿ ಕಚೇರಿ ಉಪಯೋಗಕ್ಕೆ ಕೊಟ್ಟ ವಸ್ತುಗಳು ಜಖಂ ಗೊಂಡರೆ ಅದಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಲಾಗುತ್ತದೆ ಎಂದರೆ ಸರಿಯಲ್ಲ. ನಾನು ಹೇಳಿದ ಜೀಪ್ ದಿ.21.11.2022 ರಂದೇ ಪೋಲಿಸ್ ಠಾಣಾ ಆವರಣಕ್ಕೆ ತೆಗೆದುಕೊಂಡು ಹೋಗಿದ್ದರು. ಈ ವಿಚಾರ ಸತ್ಯವಾಗಿದ್ದರೆ 4 ದಿನದ ನಂತರ ಅಮಾನತ್ತು ಮಹಜರ್ ಬರೆಯುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಕುಂದೂರು ಗ್ರಾಮಸ್ಥರು ಮೃತರ ಸಂಬಂಧಿಕರಿಗೆ ಪರಿಹಾರ ಕೊಡಿಸುವ ಸಂಬಂಧ ನಮ್ಮ ಇಲಾಖಾ ಕಚೇರಿಯ ಮುಂದೆ ಪ್ರತಿಭಟನೆ ಮಾಡಿದ್ದರಿಂದ ನಾವು ದಿ.25.11.2022 ರಂದು ನಮ್ಮ ಜೀಪನ್ನು ಪೋಲಿಸರಿಗೆ ಕೊಟ್ಟು ಉದ್ದೇಶಪೂರ್ವಕವಾಗಿ ಮಹಜರ್ ಬರೆಸಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳಿದ ಜೀಪ್ ಗೆ ಆದ ಜಖಂಗೂ ಪ್ರಕರಣದ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲು: ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.